

ತಲೆಬುರುಡೆಗಳ ಗೋಡೆಗೆ ಗಾಜಿನ ಸಂರಕ್ಷಣೆ

ತಂತ್ರವಾಗಿ ಈ ಸ್ಕಲ್ ಟವರ್ ಕಟ್ಟುತ್ತಾರೆ. ಕ್ರೂರ ಹಿಂಸೆಗಳು, ಶತ್ರುಗಳ ಎಲುಬು–ರುಂಡಗಳಿಂದ ಸ್ಮಾರಕಗಳನ್ನು ನಿರ್ಮಿಸಿ ಇತರರನ್ನು ಹೆದರಿಸುವುದು... ಇತ್ಯಾದಿ ಭೀಕರ ನಡತೆ ಆ ಕಾಲದಲ್ಲಿತ್ತು ಎನ್ನುವುದನ್ನು ಚರಿತ್ರೆ ದೃಢಪಡಿಸುತ್ತದೆ. ಹರ್ಷಿದ್ ಪಾಶ ಎನ್ನುವ ಒಟ್ಟೊಮಾನ್ ಗವರ್ನರ್, ಭಯ ತರಿಸುವಂತೆ ದಂಗೆಕೋರರ ತಲೆಬುರುಡೆಗಳ ಬುರುಜೊಂದನ್ನು ಕಟ್ಟಲು ಆದೇಶ ಹೊರಡಿಸುತ್ತಾನೆ.

'ಬ್ಯಾಟಲ್ ಆಫ್ ಸೆಗಾರ್' ಎಂದು ಕರೆಯಲಾಗುವ ಈ ಯುದ್ಧದಲ್ಲಿ ಮಡಿದ ಸರ್ಬಿಯನ್ ಸೈನಿಕರ ತಲೆಬುರುಡೆಗಳನ್ನು ಕಡಿಸಿ ತರಿಸುತ್ತಾನೆ. ಅವುಗಳ ಚರ್ಮ, ಕೂದಲು ಎಲ್ಲವನ್ನೂ ತೆಗೆದು ತಮ್ಮ ರಾಜ ಎರಡನೇ ಮಹಮದ್‌ಗೆ ಕಳಿಸಿಕೊಡುತ್ತಾನೆ. ಆನಂತರ ಅವುಗಳನ್ನು ಹಿಂಪಡೆದುಕೊಂಡು ನಿಸ್ ಪ್ರಾಂತ್ಯದಲ್ಲಿ ಈ ತಲೆಬುರುಡೆಗಳನ್ನು ಜೋಡಿಸಿ ಒಂದು ಗೋಪುರ ನಿರ್ಮಿಸುತ್ತಾನೆ. 15 ಅಡಿ ಎತ್ತರದ ಈ ಗೋಪುರದಲ್ಲಿ 952 ತಲೆಬುರುಡೆಗಳನ್ನು ಜೋಡಿಸಿ 14 ಸ್ತರಗಳಲ್ಲಿ ಒಂದು ಬುರುಜನ್ನು ಕಟ್ಟಿಸುತ್ತಾನೆ. ತೆರೆದ ಬಯಲಿನಲ್ಲಿ ಅದನ್ನು ಎಲ್ಲರಿಗೂ ಕಾಣುವಂತೆ ನಿಲ್ಲಿಸಲಾಗುತ್ತದೆ. ಅದನ್ನು ನೋಡಿದ ಯಾವುದೇ ಸರ್ಬಿಯನ್ನರು ಭಯಬಿದ್ದು ತಮ್ಮ ಮೇಲೆ ದಂಗೆಯೇಳದಂತೆ ತಡೆಯುವ ತಂತ್ರ ಹೂಡುತ್ತಾನೆ.

## ಬುರುಜು ಉರುಳಿಸಲು ಆದೇಶ

ಆದರೆ, ಚರಿತ್ರೆ ಪದೇ ಪದೇ ಸಾಬೀತು ಮಾಡಿರುವಂತೆ ಯಾವ ದೊರೆಯೂ ಶಾಶ್ವತವಲ್ಲ. ಹಾಗಾಗಿ ಅವರ ಆಧಿಪತ್ಯದ ಅಂತ್ಯದ ಸುಳಿವು ಸಿಗಲಾರಂಭಿಸುತ್ತದೆ. 1861ರಲ್ಲಿ ಮಿದತ್ ಪಾಶ ಎನ್ನುವ ಗವರ್ನರ್ ಈ ಬುರುಜನ್ನು ಬೀಳಿಸಲು ಆದೇಶ ಹೊರಡಿಸುತ್ತಾನೆ. ಸ್ಕಲ್ ಟವರ್ ಜನರಲ್ಲಿ ಭಯ ಹುಟ್ಟಿಸುವ ಬದಲು ಒಟ್ಟೊಮಾನರ ಮೇಲೆ ದ್ವೇಷ ಹೆಚ್ಚಿಸುತ್ತಿದೆ ಎನ್ನುವ ಅರಿವು ಮತ್ತು ಭಯ ಅವನಿಗಾಗಿರುತ್ತದೆ. ಆ ಕೆಲಸ ನಡೆಯಬೇಕು ಎನ್ನುತ್ತಿರುವಾಗಲೇ 1878ರಲ್ಲಿ ಅವರು ಸರ್ಬಿಯಾ ದೇಶವನ್ನು ಪೂರ್ಣವಾಗಿ ಬಿಡಬೇಕಾಗುತ್ತದೆ.

ಸ್ವತಂತ್ರರಾದ ಆ ಕೂಡಲೇ ತಲೆಬುರುಡೆಗಳ ಗೋಪುರವನ್ನು ಸರ್ಬಿಯನ್ನರು ತಮ್ಮ ದೇಶದ ವೀರ ಯೋಧರ ಸ್ಮಾರಕವಾಗಿ ಮಾರ್ಪಡಿಸುತ್ತಾರೆ. ಆ ವೇಳೆಗೆ ಬಿಸಿಲು–ಮಳೆ–ಚಳಿಗೆ ಸಿಲುಕಿದ ತಲೆಬುರುಡೆಗಳು ಅರೆಬರೆ ಹಾಳಾಗಿರುತ್ತವೆ. ಅದರ ಪುನರುಜ್ಜೀವನದ ಕೆಲಸ ನಡೆಯುತ್ತದೆ. ಗೋಪುರದ ಮೇಲೊಂದು ಚಾವಣಿ ಏಳುತ್ತದೆ. 1894ರ ವೇಳೆಗೆ ಅದರ ಸುತ್ತ ಒಂದು ಪ್ರಾರ್ಥನಾ ಸ್ಥಳವೂ ನಿರ್ಮಾಣಗೊಳ್ಳುತ್ತದೆ. ಕಾಲ ಗತಿಸಿದಂತೆಲ್ಲ ಈ ಚಾರಿತ್ರಿಕ ಘಟನೆಯ ಮಹತ್ವವೂ ಬೆಳೆಯುತ್ತದೆ. 1948ರ ವೇಳೆಗೆ ಇದನ್ನು 'ಅತ್ಯಂತ ಮಹತ್ವದ ಚರಿತ್ರಾರ್ಹ ಸ್ಥಳ' ಎಂದು ಸರ್ಬಿಯನ್ ಸರ್ಕಾರ ಘೋಷಿಸುತ್ತದೆ.

ಇದೀಗ ಸರ್ಬಿಯಾ ದೇಶದ ಈ ಬುರುಜು ಪ್ರವಾಸಿ ಸ್ಥಳವಾಗಿದೆ. ಜನರು ಮುಟ್ಟದಿರಲೆಂದು ಬುರುಜಿನ ಸುತ್ತ ಗಾಜಿನ ಭದ್ರತೆ ಒದಗಿಸಲಾಗಿದೆ. ದೇಶಕ್ಕಾಗಿ ಜೀವತೆತ್ತ ಯೋಧರ ಸಾವು, ಬದುಕಿರುವವರಿಗೆ ಪ್ರೇರಣೆ ನೀಡುತ್ತಿದೆ.

ಆದರೆ ಈ ನೂರಾರು ವರ್ಷಗಳಲ್ಲಿ ಹಲವು ತಲೆಬುರುಡೆಗಳು ಸಂಪೂರ್ಣ ನಾಶ ಹೊಂದಿವೆ. ಹಲವು ಯೋಧರ ಗುರುತಿಸಲಾಗದ ಮುಖಗಳು ಈ ಸ್ಮಾರಕ ತೊರೆದಿವೆ. ಇನ್ನು ಕೆಲವನ್ನು ಸರ್ಬಿಯನ್ನರೇ ತಮ್ಮ ಕುಟುಂಬದ್ದೆಂದು ಅಗೆದು ತೆಗೆದು ಅಂತ್ಯಸಂಸ್ಕಾರ ನಡೆಸಿರಬಹುದೆನ್ನುವ ವದಂತಿಗಳಿವೆ. ನೆನಪಿಗಾಗಿ ಹಲವರು ಕದ್ದೊಯ್ದಿರಬಹುದು ಎನ್ನಲಾಗಿದೆ. ಇಂಥವುಗಳನ್ನು ಸರ್ಬಿಯಾ ದೇಶ ಹುಡುಕಾಡಿ ಪತ್ತೆಹಚ್ಚುವ ಕಾರ್ಯಾಚರಣೆಯನ್ನೂ ನಡೆಸಿತು. ಆದರೆ ಸಿಕ್ಕಿದ್ದು ಬಹಳ ಕಡಿಮೆ.

2022ರ ಗಣನೆ ಪ್ರಕಾರ ಇದೀಗ ಈ ಬುರುಜಿನಲ್ಲಿ ಕೇವಲ 58 ತಲೆಬುರುಡೆಗಳಿವೆ. ಆ ದಂಗೆಯ ನಾಯಕ ಸ್ಟೆವಾನ್ ಸಿಂಡಲಿಕ್‌ನದು ಎನ್ನಲಾಗಿರುವ ತಲೆಬುರುಡೆಯನ್ನು ವಿಶೇಷ ಗಾಜಿನ ಪೆಟ್ಟಿಗೆಯಲ್ಲಿಟ್ಟಿದ್ದಾರೆ. ಪ್ರತಿ ವರ್ಷ 30–50 ಸಾವಿರ ಜನರು ದೇಶ–ವಿದೇಶಗಳಿಂದ ಈ ಸ್ಮಾರಕ ನೋಡಲು ಸರ್ಬಿಯಾಗೆ ಬರುತ್ತಾರೆ.

ತಮ್ಮ ಶತ್ರು ಸೈನಿಕರ ತಲೆಬುರುಡೆಗಳನ್ನು ಉಳಿಸಿ ಸರ್ಬಿಯನ್ನರಿಗೆ ಉಡುಗೊರೆಯಾಗಿ ನೀಡುವ ಅನುದ್ದೇಶಿತ ಕೆಲಸ ಒಟ್ಟೊಮಾನರ ಕೈಮೀರಿ ನಡೆದುಹೋಗಿರುವುದು ಚಾರಿತ್ರಿಕ ವಿಪರ್ಯಾಸವಾಗಿ ಇಲ್ಲಿ ಕಾಣಲು ಸಿಗುತ್ತದೆ.

ಒಟ್ಟೊಮಾನರು ಸರ್ಬಿಯಾ ದೇಶವನ್ನು 560 ವರ್ಷ 7 ತಿಂಗಳುಗಳ (ಅಕ್ಟೋಬರ್ 1352 – ಮೇ 1913) ಕಾಲ ಆಳಿದ್ದರೂ, ಸರ್ಬಿಯನ್ನರು ತಮ್ಮ ಸ್ವಾತಂತ್ರ್ಯದ ಕನಸನ್ನು ಬಿಟ್ಟವರಲ್ಲ. ಐನೂರು ವರ್ಷಗಳಲ್ಲಿ ಸಾಕಷ್ಟು ದಂಗೆಗಳು ನಡೆದಿವೆ. ಆದರೆ ಸರ್ಬಿಯನ್ನರನ್ನು ಹೆದರಿಸಿ ಹತ್ತಿಕ್ಕಲು ಕಟ್ಟಿದ ಈ ಗೋಪುರ, ಇಂದು ಸ್ಮಾರಕವಾಗಿದೆ. ಅದೆಷ್ಟೋ ಸರ್ಬಿಯನ್ನರಿಗೆ ತಮಗೆ ಸ್ವಾತಂತ್ರ್ಯ ಬರಲು ಈ ದಂಗೆ ಅತ್ಯಂತ ಮುಖ್ಯ ಕಾರಣ ಎಂದು ನಂಬಲು ಅನುವು ಮಾಡಿಕೊಟ್ಟಿದೆ. ಮಕ್ಕಳನ್ನು ಕರೆತಂದು ಸ್ವಾತಂತ್ರ್ಯದ ಬೆಲೆಯೇನೆಂದು ತಿಳಿಸಲು ಪೋಷಕರಿಗೆ ನೆರವಾಗಿದೆ. ಅವರ ಹಿಂದಿನ ತಲೆಮಾರಿನವರು ಎಂಥ ವೀರರೆಂದು ಹೇಳಿ ಅವರಲ್ಲಿ ದೇಶಪ್ರೇಮ ಉದ್ದೀಪಿಸಲು ಉದಾಹರಣೆಯಾಗಿದೆ.

ಜಗತ್ತಿನ ಹಲವರು ಈ ಬಗ್ಗೆ ಕವಿತೆಗಳನ್ನು ಬರೆದಿದ್ದಾರೆ. ಏತಕ್ಕಾಗಿ ಚರಿತ್ರೆಯ ತುಣುಕುಗಳನ್ನು, ಸ್ಮಾರಕಗಳನ್ನು ಉಳಿಸಿಕೊಳ್ಳಬೇಕೆನ್ನುವುದನ್ನು ಈ ಜಾಗ ಜಗತ್ತಿಗೆ ಕಲಿಸುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in